# ಬಾಬಾಬುಡನ್‌ಗಿರಿಗೆ ನೀಲಿ ಹೊದಿಕೆ

■ ಚಿತ್ರ – ಬರಹ:
**ದಿನೇಶ ಪಟವರ್ಧನ್**





ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿ ಶ್ರೇಣಿಯಲ್ಲಿ 12 ವರ್ಷಕ್ಕೊಮ್ಮೆ ಕಾಣಿಸುವ ನೀಲ ಕುರಂಜಿ ಹೂ ಅರಳಿ ಕಂಪು ಸೂಸುತ್ತಿದೆ. ಕೆಮ್ಮಣ್ಣಗುಂಡಿ – ಮಹಲ್– ಬಾಬಾಬುಡನ್‌ಗಿರಿ ಶ್ರೇಣಿಯ ಸುತ್ತಮುತ್ತ ಈಗ ಎತ್ತ ನೋಡಿದರೂ ಬೆಟ್ಟಗುಡ್ಡಗಳು ನೀಲ ವರ್ಣಕ್ಕೆ ತಿರುಗಿದ್ದು ಕಣ್ಮನ ಸೆಳೆಯುತ್ತವೆ.

ನೀಲಗಿರಿ ಶ್ರೇಣಿ ಸೇರಿದಂತೆ ದೇಶದ ಕೆಲವೇ ಪ್ರದೇಶಗಳಲ್ಲಿ ಈ ಅಪರೂಪದ ನೀಲ ಕುರಂಜಿ ಹೂ ಕಾಣಸಿಗುವಂಥದು.

ಹೂ ಅರಳಿ, ಕಂಪು ಸೂಸಿ, ತೂಗಿ–ಬಾಗಿ ಬರೋಬ್ಬರಿ ಒಂದು ತಿಂಗಳು ತನ್ನ ಸೌಂದರ್ಯವನ್ನು ಪ್ರದರ್ಶಿಸಿ ನಿಲ್ಲುವ ಈ ನೀಲವೇಣಿಯ ಬದುಕು ಸೃಷ್ಟಿಯ ಅದ್ಭುತಗಳಲ್ಲಿ ಒಂದು. ಸ್ಟ್ರೋಬಲಾಂಥಸ್ ಕುಂತಿಯನಸ್ ಎನ್ನುವ ವೈಜ್ಞಾನಿಕ ಹೆಸರಿನ ಈ ಸಸ್ಯ ಅಕ್ಯಾಂಥೇಸಿ ಕುಟುಂಬಕ್ಕೆ ಸೇರಿದೆ. ಕುರಂಜಿ, ನೀಲಕುರಂಜಿ, ಕಾರ್ವಿ ಎಂದೂ ಕರೆಯುತ್ತಾರೆ. ಬಹುವಾರ್ಷಿಕ ಪೊದೆ ಸಸ್ಯವಿದು.

ಪಶ್ಚಿಮಘಟ್ಟ ಸರಣಿಯ ಮರಗಳಿರದ ಹುಲ್ಲುಗಾವಲು ಪ್ರದೇಶದಲ್ಲಿಯೂ ಈ ಗಿಡಗಳನ್ನು ನೋಡಬಹುದು. ಇದರಲ್ಲಿ 42 ಪ್ರಬೇಧಗಳು ಇವೆ ಎನ್ನಲಾಗಿದೆ. ಕೆಲವೊಂದು ಹೂ 8 ವರ್ಷಕ್ಕೆ ಅರಳಿದರೂ ಈ ಪ್ರಮಾಣದಲ್ಲಿ ಇರುವುದಿಲ್ಲ.

ಬೆಟ್ಟಗುಡ್ಡಗಳ ತುಂಬೆಲ್ಲಾ ನೀಲರಾಶಿ ಕಂಗೊಳಿಸಿ ಗಾಳಿ ಬಂದಾಗ ತೊನೆದಾಡುವ ಸೊಬಗಿನ ಪರಿ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಹೂವಿನ ಮಕರಂದ ಹೀರಲು ಜೇನ್ನೊಣಗಳ ಜಾತ್ರೆಯೂ ಸೇರುತ್ತದೆ. ಒಂದು ತಿಂಗಳು ಪೂರ್ತಿ ಗಿಡಗಳಲ್ಲಿ ಹೂವಿರುತ್ತದೆ. ಬಳಿಕ ಕಾಯಿ ಬಿಟ್ಟು ಗಿಡ ಬಾಡಿ ಸಾಯುತ್ತದೆ. ನೆಲಕ್ಕೆಬಿದ್ದ ಬೀಜಗಳು ಮಳೆಗಾಲದಲ್ಲಿ ಮೊಳಕೆ ಒಡೆದು ಕ್ರಮೇಣ ಬೆಳೆಯುತ್ತವೆ. ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣಗುಂಡಿ, ಬಾಬಾಬುಡನ್‌ಗಿರಿ, ಕುದುರೆಮುಖ, ಶಿಶಿಲಕುಡಿ ಬೆಟ್ಟಗಳಲ್ಲಿ ಈ ಹೂಗಳನ್ನು ಕಾಣಬಹುದು.